# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ, ಗುಬ್ಬಿ

| | |
|---|---|
| ಸಾಕ್ಷಿದಾರರ ಹೆಸರು<br>ತಂದೆಯ ಹೆಸರು<br>ವಯಸ್ಸು<br>ಕೆಲಸ<br>ವಾಸ | ವರದರಾಜು<br>ಓಬನಾಯಕ್<br>42 ವರ್ಷ<br>ಮುಖ್ಯ ವ್ಯವಸ್ಥಾಪಕರು ಎಸ್ ಬಿ ಐ, railway station road, Gubbi<br>ತುಮಕೂರು |
| | ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 24.04.2026 |

## ಮುಖ್ಯ ವಿಚಾರಣೆಃ

ಸಾಕ್ಷಿಗೆ ನಿಪಿ.2 ಅನ್ನು ತೋರಿಸಿ ಕರ್ನಾಟಕ ಬ್ಯಾಂಕ್ ನವರು ಆರೋಪಿಯ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ ಎಂಬ ಹಿಂಬರಹವನ್ನು ನಿಪಿ.2 ರಂತೆ ದಿಃ 28.09.2018 ರಂದು ನೀಡಿದ್ದು, ನಾವು ಪಿರ್ಯಾದುದಾರರಿಗೆ ದಿಃ 29.10.2018 ರಂದು ಮೆಮೋವನ್ನು ಕೊಟ್ಟಿದ್ದೇವೆ ಎಂದು ನುಡಿಯುತ್ತಾರೆ. ಪಿರ್ಯಾದುದಾರರು ಯಾವಾಗ ನಮ್ಮ ಬ್ಯಾಂಕಿಗೆ ಬಂದಿದ್ದಾರೋ ಅವಾಗ ಹಿಂಬರಹವನ್ನು ಅವರಿಗೆ ನೀಡಿದ್ದೇವೆ ಎಂದು ನುಡಿಯುತ್ತಾರೆ.

## ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ವಿ ಕೆ ರವರಿಂದಃ

ಪಿರ್ಯಾದುದರರು ಮುಂಚಿತವಾಗಿ ಬಂದು ನಿಮ್ಮ ಬಳಿ ಮೆಮೋವನ್ನು ಪಡೆದುಕೊಂಡಿದ್ದರೂ ಕೂಡ ನೀವು ದಿಃ 29.10.2018 ರಂದು ಅವರಿಗೆ ಮೆಮೋ ನೀಡಿರುವುದಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಪಿ.3 ರಲ್ಲಿ funds insuffcient ಎಂದು ಎಲ್ಲಿಯೂ ಇಲ್ಲ ಎಂದರೆ ಸರಿ. ಸಾಕ್ಷಿ

ಮುಂದುವರೆದು ನಿಪಿ.3 ರ ಜೊತೆ ಕರ್ನಾಟಕ ಬ್ಯಾಂಕ್ ನವರು ನೀಡಿದ್ದ ನಿಪಿ.2 ರ ಹಿಂಬರಹವನ್ನು ಕೂಡ ಪಿರ್ಯಾದುದಾರರಿಗೆ ನೀಡಿದ್ದೇವೆ ಎಂದು ನುಡಿಯುತ್ತಾರೆ. ನಿಮ್ಮ ಬ್ಯಾಂಕಿನಿಂದ insuffcient fund ಎಂದು ನೀವು ಯಾವುದೇ ಮೆಮೋ ನೀಡಿಲ್ಲ ಎಂದರೆ ಬೇರೆ ಬ್ಯಾಂಕಿನವರ ಬಗ್ಗೆ ನಾವು certify ಮಾಡಲು ಬರುವುದಿಲ್ಲ, ಬೇರೆ ಬ್ಯಾಂಕಿನವರು ನೀಡಿರುವ ಹಿಂಬರಹವನ್ನು ಮಾತ್ರ ಪಿರ್ಯಾದುದಾರರಿಗೆ ನೀಡಿದ್ದೇವೆ ಎಂದು ನುಡಿಯುತ್ತಾರೆ. ಪಿರ್ಯಾದುದಾರರಿಗೆ ಸಹಾಯ ಮಾಡುವ ಉದ್ದೇಶದಿಂದ amount cut ಆಗಿರುವ ಮೆಮೋವನ್ನು ಮಾತ್ರ ನಿಪಿ3 ರಂತೆ ಅವರಿಗೆ ನೀಡಿದ್ದೀರಿ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಪಿರ್ಯಾದುದಾರರ ಪರ ಏನು ಇಲ್ಲ**

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

ಓ . ಹೇ. ಕೇ. ಸರಿ. ಇದೆ

**ಪ್ರ.ದ. ನ್ಯಾ ದಂ. ಗುಬ್ಬಿ**

A1 and A16 absent. EP filed. Perused. Allowed.
A2 to 9,A11 and A13 and A15 present.
.C.w1 present. He is examined as P.W.1 and got marked Ex.P.1to Ex.P.13.
L/C for accused prays time for cross examining PW1. Prayer allowed on cost of Rs.300/-.
For cross of PW1.
Call on.21.03.2024.

Prl.C.J and JMFC, Gubbi.

4. ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಲಾಗಿದ್ದು ಅದು ಪ್ರ.ವ.ವ ಆಗಿದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.8 ಎಂದು ಗುರುತಿಸಲಾಯಿತು. ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ ಸದರಿ ಸಹಿಯನ್ನು ನಿ.ಪಿ.8(ಎ)ಎಂದು ಗುರುತಿಸಲಾಯಿತು.

5. ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಲಾಗಿದ್ದು ಅದು ಸ್ಥಳ ಪಂಚನಾಮೆ ಆಗಿದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ.ಪಿ.2 ಎಂದು ಗುರುತಿಸಲಾಗಿದೆ.

ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ ಸದರಿ ಸಹಿಯನ್ನು ನಿ.ಪಿ.2(ಡಿ)ಎಂದು ಗುರುತಿಸಲಾಯಿತು.

6. ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಲಾಗಿದ್ದು ಅದು ಚಾಸಾ 1 ರವರ ಗಾಯದ ಪ್ರಮಾಣಪತ್ರ ಆಗಿದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ.ಪಿ.7 ಎಂದು ಗುರುತಿಸಲಾಗಿದೆ. ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಸಹಿಯನ್ನು ನಿ.ಪಿ.7(ಬಿ)ಎಂದು ಗುರುತಿಸಲಾಯಿತು.



**ಸಿ.ಡಬ್ಲು 07**

7. ನ್ಯಾಯಾಲಯದ ಮುಂದಿರುವ 1 ಕಬ್ಬಿಣದ ಸುಮಾರು 1 ಅಡಿ ಉದ್ದದ 1/4 X1/4 ದಪ್ಪದ ಉಳಿಯನ್ನು , ರಕ್ತದ ಕಲೆಯಾಗಿದ್ದ ಹಸಿರುಬಣ್ಣ ದ ರವಿಕೆಯನ್ನು , ಒಂದು ಕಡು ನೀಲಿ ಬಣ್ಣದ ಚುಕ್ಕೆ ಇರುವ ಬಾರ್ಡರ್ ಇರುವ ಸೀರೆಯನ್ನು ಹಾಗೂ ಒಂದು ಒಳಹಿಡಿ ಗಾತ್ರದ 2.3/4 ಮುಕ್ಕಾಲು ಅಡಿ ಉದ್ದದ ದೊಣ್ಣೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಮುಮಾ.1 ರಿಂದ ಮು.ಮಾ.4 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಆರೋಪಿಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**<u>ಪಾಟೀಸವಾಲು ಆರೋಪಿಪರ ವಕೀಲರಾದ ಶ್ರೀ.ಎಸ್.ಎನ್.ಹೆಚ್.ರವರಿಂದ ಃ–</u>**

ಘಟನೆ ನಡೆದ ದಿನಾಂಕ–30–06–2017 ಆಗಿರುತ್ತದೆ. ಚಾಸಾ 1 ದಿಃ03–07–2017 ರಂದು ದೂರು ನೀಡಿರುತ್ತಾರೆ. ಚಾಸಾ –1 ಆರೋಪಿಗಳ ವಿರುದ್ಧ

ಸುಳ್ಳು ದೂರು ನೀಡಿದ್ದಾರೆ ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳಕ್ಕೆ ಹೋಗಿಲ್ಲ , ಅಲ್ಲಿ ಸ್ಥಳ ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳದ ಚಕ್ಕುಬಂದಿ ನನಗೆ ಗೊತ್ತು. ನಿ.ಪಿ.2 ರಲ್ಲಿ ನಮೂದಿಸಿರುವ ಚಕ್ಕುಬಂದಿ ತಪ್ಪಾಗಿರುತ್ತದೆ ಎಂದರೆ ಸರಿಯಲ್ಲ. ಚಾಸಾ 1, 2 ,3 ಹಾಗೂ ಆರೋಪಿಗಳು ರಕ್ತಸಂಬಂದಿಕರು ಎಂದರೆ ಸರಿ. ಜಮೀನಿನ ವಿವಾದದ ದ್ವೇಷದಿಂದ ಚಾಸಾ 1 ಆರೋಪಿಗಳ ವಿರುದ್ಧ ಸುಳ್ಳು ದೂರು ನೀಡಿದ್ದಾರೆ ಎಂದರೆ ಸರಿಯಲ್ಲ. ಚಾಸಾ 1 ಆರೋಪಿಗಳ ವಿರುದ್ಧ ಹಲವು ಸುಳ್ಳು ದೂರುಗಳನ್ನು ನೀಡಿ ಸುಳ್ಳು ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ಮು.ಮಾ1 ರಿಂದ 4 ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಮು.ಮಾ1 ರಿಂದ 4 ಕ್ಕೂ ಆರೋಪಿಗಳಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಮು. ಮಾ1 ರಿಂದ 4 ಅನ್ನು ಈ ಪ್ರಕರಣಕ್ಕಾಗಿ ಸೃಷ್ಟಿಮಾಡಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.2 ಮತ್ತು ನಿ.ಪಿ.3 ಅನ್ನು ನಾನು ಠಾಣೆಯಲ್ಲಿ ಕೂತು ತಯಾರು ಮಾಡಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.7 ಸುಳ್ಳು ಗಾಯದ ಪ್ರಮಾಣಪತ್ರ ಆಗಿರುತ್ತದೆ ಎಂದರೆ ಸರಿಯಲ್ಲ ಚಾಸಾ 1 ರವರೇ ಆರೋಪಿಗಳ ಮೇಲೆ ಗಲಾಟೆ ಮಾಡಿ ಅದರಿಂದ ತಪ್ಪಿಸಿಕೊಳ್ಳಲು ಆರೋಪಿಗಳ ವಿರುದ್ಧ ಸುಳ್ಳು ದೂರು ನೀಡಿರುತ್ತಾರೆ ಎಂದರೆ ಸರಿಯಲ್ಲ.

ಸಿ.ಸಿ.398/2017 4 ಪಿ.ಡಬ್ಲ್ಯು:
07

**ಸಿ.ಡಬ್ಲ್ಯು 07**

ಚಾಸಾ 1 ರವರು ಆರೋಪಿಗಳ ವಿರುದ್ಧ ಗಲಾಟೆ ಮಾಡಿದ್ದು ಆಗ ನಾನು ಇಬ್ಬರನ್ನು ಠಾಣೆಗೆ ಕರೆಸಿಕೊಂಡು ರಾಜಿ ಮಾಡಿದ್ದೆ ಎಂದರೆ ಸರಿಯಲ್ಲ. ಚಾಸಾ 1 ರವರ ಒತ್ತಡಕ್ಕೆ ಮಣಿದು ನಾನು

ಆರೋಪಿಗಳ ವಿರುದ್ದ ಈ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಸರಿಯಾಗಿ ತನಿಖೆ ಮಾಡದೇ ಆರೋಪಿಗಳ ವಿರುದ್ದ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.2 ಕ್ಕೆ ಸಾಕ್ಷಿಗಳ ಸಹಿಯನ್ನು ನಾನು ಠಾಣೆಯಲ್ಲೇ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ಸ್ಥಳೀಕರನ್ನು ನಾನು ನಿ.ಪಿ.2 ಕ್ಕೆ ನಾನು ಪಂಚರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

ಓ . ಹೇ. ಕೇ. ಸರಿ. ಇದೆ

**ಪ್ರ.ದ. ನ್ಯಾ ದಂ. ಗುಬ್ಬಿ**